MAY 31, 2025

**AKASHAVANI - DHARWAD**

**PRADESH SAMACHARA (KANNADA) 12.00 A.M.**

<><><>

**ಆಕಾಶವಾಣಿ 31.05.2025**

**ಪ್ರದೇಶ ಸಮಾಚಾರ 12.00 ಗಂಟೆಗೆ**

<><><>

**1.** ಎಚ್.ಎಸ್.ವಿ. ಎಂದೇ ಚಿರಪರಿಚಿತ, ನಾಡಿನ ಹಿರಿಯ ಕವಿ, ಡಾಕ್ಟರ್ ಎಚ್.ಎಸ್. ವೆಂಕಟೇಶ ಮೂರ್ತಿ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಬೆಂಗಳೂರಿನ ಚಾಮರಾಜಪೇಟೆಯ ಟಿ.ಆರ್.ಮಿಲ್‌ನ ಚಿತಾಗಾರದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ ಸಕಲ ಸರ್ಕಾರಿ ಗೌರವಗಳೊಂದಿಗೆ, ನೆರವೇರಿತು.

ಭಾವಗೀತೆ, ನಾಟಕ, ವ್ಯಕ್ತಿಚಿತ್ರ ಸಾಹಿತ್ಯದಲ್ಲಿ ಅಪರೂಪದ ಛಾಪು ಮೂಡಿಸಿದ್ದ, ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ, ಎಚ್.ಎಸ್.ವಿ. ಅವರಿಗೆ, 80 ವರ್ಷ ವಯಸ್ಸಾಗಿತ್ತು.

<><><>

**2.** ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ, ಗದಗ ಜಿಲ್ಲೆಯ ಹುಲಕೋಟಿ ಗ್ರಾಮದ, ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದ ಆಶ್ರಯದಲ್ಲಿ, ಗದಗ ಜಿಲ್ಲೆಯ ರೋಣ ತಾಲೂಕಿನ ಮುದೇನಗುಡಿ, ಹಿರೇಮಣ್ಣೂರು, ತಳ್ಳಿಹಾಳ, ಅಸೂಟಿ ಹಾಗೂ ಕರಮುಡಿ ಗ್ರಾಮಗಳಲ್ಲಿ ಜರುಗಿತು.

ಗದಗ ಜಿಲ್ಲೆ, ಅಸೂಟಿ ಗ್ರಾಮದ ರೈತ ಯಲ್ಲಪ್ಪಗೌಡ ಪಾಟೀಲ ತಮ್ಮ ಅನಿಸಿಕೆ ವ್ಯಕ್ತ ಪಡಿಸಿದ್ದಾರೆ.

<><><>

ಯಲ್ಲಪ್ಪಗೌಡ ಪಾಟೀಲ ಧ್ವನಿ 20 ಸೆಕೆಂದುಗಳು

<><><>

**3.** ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ, ವಾಯುಯಾನ ತರಬೇತಿ ಸಂಸ್ಥೆ – ಎಫ್.ಟಿ.ಓ. ಸ್ಥಾಪನೆಗೆ, ರಾಜ್ಯ ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ಯೋಜನೆ ರೂಪಿಸಿದೆ, ಎಂದು ಮೂಲಸೌಕರ್ಯ ಅಭಿವೃದ್ಧಿ ಖಾತೆ ಸಚಿವ, ಎಂ.ಬಿ.ಪಾಟೀಲ ತಿಳಿಸಿದ್ದಾರೆ.

<><><>

**4.** ಸಾವಿರದ 200 ಕೋಟಿ ರೂಪಾಯಿ, ದಾಖಲೆ ಮೊತ್ತದ, ತೆರಿಗೆ ಸಂಗ್ರಹಿಸಿ, ಗ್ರಾಮ ಪಂಚಾಯಿತಿಗಳ ಆರ್ಥಿಕ ಸಂಪನ್ಮೂಲ ಕ್ರೋಢೀಕರಣದ ವಿ ’ಯದಲ್ಲಿ, ಯಶಸ್ಸಿನ ಹಾದಿಯಲ್ಲಿದ್ದೇವೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ್ ಖರ್ಗೆ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ.

<><><>

5. ವಿಜಯಪುರದ ಸುಕುನ್ ಕಾಲೊನಿಯ ಮುಖ್ಯದ್ವಾರದ ಹತ್ತಿರ, 1 ಎಕರೆ 20 ಗುಂಟೆ ಜಾಗೆಯಲ್ಲಿ, ವಿಜಯಪುರ ಸೈಕ್ಲಿಂಗ್ ಗ್ರೂಪ್ ಸಹಯೋಗದಲ್ಲಿ 'ಮಿಯಾವಾಕಿ' ಅರಣ್ಯ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ. ಕೋಟಿ ವೃಕ್ಷಾರೋಪಣ ಅಭಿಯಾನದಿಂದ, ಬಸವನಾಡು ಹಸುರಾಗಲಿದೆ ಎಂದಿದ್ದಾರೆ.

<><><>

6. ಉತ್ತರಕನ್ನಡ ಜಿಲ್ಲೆ, ದಾಂಡೇಲಿ ವ್ಯಾಪ್ತಿಯ, ಕಾಳಿ ಹುಲಿ ಸಂರಕ್ಷಿತ ಅಭಯಾರಣ್ಯದಲ್ಲಿ, ನದಿಯ ಪುಟ್ಟ ಉಪಹರಿವಿನ ಅಳಿವೆಯಲ್ಲಿ, ಅಪರೂಪದ ಏಳು ನೀರು ನಾಯಿ, ಸಾಫ್ಟ್ ಕೋಟೆಡ್ ಆಟ್ಟರ್ಸ್ ಪ್ರಥಮ ಬಾರಿಗೆ ಕ್ಯಾಮೆರಾ ಕಣ್ಣಲ್ಲಿ ಸೆರೆಯಾಗಿವೆ. ಗೌರವ ವನ್ಯಜೀವಿ ಕ್ಷೇಮಪಾಲಕ ಹಾಗೂ ನ್ಯಾಯವಾದಿ, ದಾಂಡೇಲಿ ರಾಹುಲ್ ಬವಾಜಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ರಾಹುಲ್ ಬವಾಜಿ ಧ್ವನಿ 30 ಸೆಕೆಂದುಗಳು

<><><>

7. ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ಕುರಡಿಕೇರಿ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿ, ಅನಿತಾ ಮಾರುತಿ ಉಣಕಲ್ಲ, ಕೆಳದಿ ಚನ್ನಮ್ಮ ರಾಜ್ಯ ಪ್ರತಿಭಾ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ವಿಜ್ಞಾನ ವಿಷಯದ ಸಹ ಶಿಕ್ಷಕಿ ರಾಜಶ್ರೀ ಬೀಡಿ, ಅನಿತಾ ಅವರಿಗೆ, ಮಾರ್ಗದರ್ಶನ ಮಾಡಿದ್ದಾರೆ.

ನಾವಿನ್ಯತೆ ಕ್ಷೇತ್ರದಲ್ಲಿ, ಅಸಾಧಾರಣ ಪ್ರತಿಭೆ ಮೆರೆಯುವ, ವಿದ್ಯಾರ್ಥಿನಿಯರಿಗೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ, ಪ್ರಶಸ್ತಿ ಹಾಗೂ 10 ಸಾವಿರ ರೂಪಾಯಿ ನಗದು ಪುರಸ್ಕಾರ ನೀಡಲಾಗುತ್ತಿದೆ.

<><><>

8. ರಾಜ್ಯದಲ್ಲಿ ನಿನ್ನೆ, ಒಟ್ಟು 114 ಜನರಿಗೆ, ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಮೈಸೂರಿನಲ್ಲಿ ಓರ್ವರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಸಾವಿನ ಸಂಖ್ಯೆ 3ಕ್ಕೆ ಏರಿಕೆಯಾಗಿದೆ.

<><><>

ಧಾರವಾಡ ತಾಲೂಕು, ಗುಲಗಂಜಿಕೊಪ್ಪದ 73 ವರ್ಷದ ಮಹಿಳೆಯೋರ್ವರಿಗೆ, ಕೋವಿಡ್ ದೃಢ ಪಟ್ಟಿದೆ. ಧಾರವಾಡ ಜಿಲ್ಲಾ ಆಸ್ಪತ್ರೆಯಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಆರೋಗ್ಯ ಸ್ಥಿರವಾಗಿದೆ ಎಂದು, ಜಿಲ್ಲಾಡಳಿತ ತಿಳಿಸಿದೆ.

<><><>

9. ಮೈಸೂರಿನ ಕರ್ನಾಟಕ ರಾಜ್ಯ, ಡಾಕ್ಟರ್ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, 2025-26ನೇ ಶೈಕ್ಷಣಿಕ ಸಾಲಿನ ಹಲವು ಕೋರ್ಸ್‌ಗಳ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಿದೆ. ಹುಬ್ಬಳ್ಳಿಯಲ್ಲಿ ಈ ವಿಷಯ ತಿಳಿಸಿದ, ಮೈಸೂರು ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ, ನಾಗೇಶ ಬೆಟಕೋಟೆ, ಜಾಲತಾಣ – UUCMS.KARNATAKA.GOV.IN ಕ್ಕೆ ಭೇಟಿ ನೀಡುವಂತೆ, ಕೋರಿದರು.

<><><>

10. ನೈಋತ್ಯ ರೇಲ್ವೆ ಪ್ರಧಾನ ವ್ಯವಸ್ಥಾಪಕ, ಮುಕುಲ್ ಸರನ್ ಮಾಥುರ್, ಹುಬ್ಬಳ್ಳಿ-ಕುಲೆಮ್ ವಿಭಾಗದಲ್ಲಿ, ವಿಂಡೋ ಟ್ರಯಲ್ ತಪಾಸಣೆ ಕೈಗೊಂಡರು.

ಹುಬ್ಬಳ್ಳಿ ಮತ್ತು ಅಳ್ನಾವರ ಮಧ್ಯೆ, ಮುಂಗಾರು ಮಳೆ ಹಿನ್ನೆಲೆ, ಅಗತ್ಯ ಪೂರ್ವ ಸಿದ್ಧತೆ, ಸುರಕ್ಷತೆ, ಸಂಚಾರ ಮುನ್ನೆಚ್ಚರಿಕೆ ಬಗ್ಗೆ, ಅವರು ಪರಿವೀಕ್ಷಿಸಿದರು.

<><><>

**11.** ಮುಂದಿನ **7** ದಿನ, ರಾಜ್ಯದ ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಲ್ಲಿ, ಸಾಧಾರಣದಿಂದ ಭಾರಿ ಮಳೆ, ಹಾಗೂ ದಕ್ಷಿಣ ಒಳನಾಡು ಮತ್ತು ಉತ್ತರ ಒಳನಾಡು ಜಿಲ್ಲೆಗಳಲ್ಲಿ, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಸಾರ್ವಜನಿಕರು ಮುಂಜಾಗ್ರತೆ ವಹಿಸಬೇಕು ಎಂದು, ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

<><><>

**12.** 'ಕರಾಳ ಉದ್ದೇಶಗಳನ್ನು ಹೊಂದಿರುವ, ಪ್ರಕಾಶಮಾನವಾದ ಉತ್ಪನ್ನಗಳ ಮುಖವಾಡ ಬಹಿರಂಗಪಡಿಸುವುದು' ಎಂಬ ಧ್ಯೇಯದೊಂದಿಗೆ, ಇಂದು ವಿಶ್ವ ತಂಬಾಕು ರಹಿತ ದಿನ ಆಚರಿಸಲಾಗುತ್ತಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ **1** ಗಂಟೆ **10** ನಿಮಿಷಕ್ಕೆ.

<><><>